# ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007

## ಪ್ರಕರಣಗಳ ಕ್ರಮ ಪಟ್ಟಿ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು:

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಗ್ರಾಮೀಣ ಪ್ರದೇಶಗಳಿಗೆ ಶಿಕ್ಷಕರ ಕಡ್ಡಾಯ ನೇಮಕಾತಿ
4. ಕೌನ್ಸಿಲಿಂಗ್ ಮೂಲಕ ವರ್ಗಾವಣೆ
5. ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ಶಿಕ್ಷಕರ ವರ್ಗಾವಣೆ
6. ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ಶಿಕ್ಷಕರನ್ನು ವರ್ಗಾವಣೆ ಮಾಡುವುದಕ್ಕೆ ನಿಷೇಧ
7. ದಂಡಗಳು
8. ಅಪರಾಧಗಳ ಸಂಜ್ಞೇಯತೆ
9. ಇತರ ಕಾನೂನುಗಳ ಮೇಲೆ ಅಧಿನಿಯಮದ ಅಧ್ಯಾರೋಹಿ ಪರಿಣಾಮ
10. ತೊಂದರೆಗಳನ್ನು ನಿವಾರಿಸಲು ಅಧಿಕಾರ
11. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ
12. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ
13. ನಿಯಮಗಳ ರಚನಾಧಿಕಾರ
14. ತಾತ್ಕಾಲಿಕ ಉಪಬಂಧಗಳು
15. ನಿರಸನ ಮತ್ತು ಉಳಿಸುವಿಕೆಗಳು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

**2007ರ ಅಧಿನಿಯಮ ಸಂಖ್ಯೆ 29.–** (1) ಶಿಕ್ಷಕನನ್ನು ನೇಮಕ ಮಾಡಿದಾಗ ಆತನನ್ನು ಒಂದು ಗ್ರಾಮೀಣ ಪ್ರದೇಶಕ್ಕೆ ನೇಮಿಸುವುದಕ್ಕಾಗಿ ಮತ್ತು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಯಾವುದೇ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸಿರದ ಶಿಕ್ಷರನನ್ನು ತಕ್ಷಣದ ಮುಂದಿನ ವರ್ಗಾವಣೆಯ ಸಂದರ್ಭದಲ್ಲಿ ಒಂದು ಗ್ರಾಮೀಣ ಪ್ರದೇಶಕ್ಕೆ ವರ್ಗಾಯಿಸುವುದಕ್ಕಾಗಿ;

(2) ಗ್ರಾಮೀಣ ಪ್ರದೇಶಕ್ಕೆ ನೇಮಿಸಿ ವರ್ಗಾಯಿಸಿದ ಶಿಕ್ಷಕನನ್ನು ಅವನು ನೇಮಕಗೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯನ್ನು ಪೂರ್ಣಗೊಳಿಸುವುದಕ್ಕೆ ಮೊದಲು ಗ್ರಾಮೀಣ ಪ್ರದೇಶದಿಂದ ಹೊರಗಿನ ಪ್ರದೇಶಕ್ಕೆ ವರ್ಗಾವಣೆ ಮಾಡದೇ ಇರುವುದಕ್ಕಾಗಿ;

(3) ಶಿಕ್ಷಕನನ್ನು ನೇಮಕ ಮಾಡಲಾದ ಒಂದು ಜೇಷ್ಠತಾ ಘಟಕದಿಂದ ಆತನನ್ನು ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಮಾಡುವುದನ್ನು ನಿಷೇಧಿಸುವುದಕ್ಕಾಗಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರು ತಪ್ಪದೆ ಲಭ್ಯವಾಗುವಂತೆ ನೋಡಿಕೊಳ್ಳುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಿಸಿದ ಇತರೆ ವಿಷಯಗಳಿಗಾಗಿ ಅಥವಾ ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗಾಗಿ,

– ನಗರ ಪ್ರದೇಶಗಳಿಂದ ನಗರಪಾಲಿಕೆಯ, ನಗರಸಭೆಯ, ಪುರಸಭೆಯ ಅಥವಾ ಪಟ್ಟಣ ಪಂಚಾಯಿತಿಯ ಪರಿಮಿತಿಗಳಿಂದ ಅಥವಾ ಜಿಲ್ಲಾ ಕೇಂದ್ರಸ್ಥಾನ ಅಥವಾ ತಾಲ್ಲೂಕು ಕೇಂದ್ರಸ್ಥಾನದಿಂದ ಗ್ರಾಮೀಣ ಪ್ರದೇಶಗಳು ಇರುವ ದೂರದ ಆಧಾರದ ಮೇಲೆ ಅವುಗಳನ್ನು ಎ–ವಲಯ, ಬಿ–ವಲಯ ಮತ್ತು ಸಿ–ವಲಯ ಎಂದು ವರ್ಗೀಕರಿಸಿ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರು ಲಭ್ಯವಾಗುವಂತೆ ಮಾಡುವುದಕ್ಕಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರೂ ಸೇರಿದಂತೆ ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಲ್ಲಿನ ಶಿಕ್ಷಕರ ವರ್ಗಾವಣೆಯನ್ನು ನಿಯಂತ್ರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2007ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:2]

[ಭಾರತದ ಸಂವಿಧಾನದ ಏಳನೆಯ ಅನುಸೂಚಿಯ ಎರಡನೇ ಪಟ್ಟಿಯ 41ನೇ ನಮೂದನೆಯಡಿಯಲ್ಲಿ ಬರುತ್ತದೆ]

II

**2015ರ ಅಧಿನಿಯಮ ಸಂಖ್ಯೆ 23.–** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು,

(i) ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗಳ ಮಿತಿಯನ್ನು ಶೇ.5 ರಿಂದ ಶೇ.8 ರವರೆಗೆ ಹೆಚ್ಚಿಸುವುದಕ್ಕಾಗಿ;

(ii) ಪತಿ ಮತ್ತು ಪತ್ನಿ ಹಾಗೂ ಪರಸ್ಪರ ವರ್ಗಾವಣೆಗಳ ಸಂದರ್ಭದಲ್ಲಿ ಒಂದು ಜೇಷ್ಠತಾ ಘಟಕದಿಂದ ಮತ್ತೊಂದು ಜೇಷ್ಠತಾ ಘಟಕಕ್ಕೆ ಶಿಕ್ಷಕರ ವರ್ಗಾವಣೆಯ ನಿಷೇಧವನ್ನು ಸಡಿಲಗೊಳಿಸುವುದಕ್ಕಾಗಿ,–

– ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ 11:, ಕಡತ ಸಂಖ್ಯೆ:ಸಂವ್ಯಶಾಇ 11 ಶಾಸನ 2015)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

III

**2015ರ ಅಧಿನಿಯಮ ಸಂಖ್ಯೆ 32.–**

(೧) 04.05.2005ರ ತರುವಾಯ ನೇಮಕವಾದ ಶಿಕ್ಷಕರಿಗೆ ಸೇವೆಯಲ್ಲಿ ಒಂದು ಬಾರಿಗೆ ಜ್ಯೇಷ್ಠತೆಯ ಘಟಕದಿಂದ ಹೊರಗೆ ವರ್ಗಾವಣೆಯ ಅವಕಾಶವನ್ನು ಕಲ್ಪಿಸುವುದಕ್ಕಾಗಿ;

(೨) ಶಿಕ್ಷಕನಿಗೆ, ಜ್ಯೇಷ್ಠತೆ ಘಟಕದ ಹೊರಗೆ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿ ಆತನ ಸಂಗಾತಿಯು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಆತನಿಗೆ ವರ್ಗಾವಣೆಯ ಅವಕಾಶವನ್ನು ಕಲ್ಪಿಸುವುದಕ್ಕಾಗಿ,

–ಉಪಬಂಧಗಳನ್ನು ಕಲ್ಪಿಸಲು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ 32:, ಕಡತ ಸಂಖ್ಯೆ:ಸಂವ್ಯಶಾಇ 41 ಶಾಸನ 2015)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

**2007ರ ಕರ್ನಾಟಕ ಅಧಿನಿಯಮ ಸಂಖ್ಯೆ: 29**

**(2007ರ ಸೆಪ್ಟೆಂಬರ್ ಒಂದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007**

**(2007ರ ಆಗಸ್ಟ್ ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)**

(2015 ಅಧಿನಿಯಮ ಸಂಖ್ಯೆ 23 ಮತ್ತು 2015ರ 32ರಲ್ಲಿ ತಿದ್ದುಪಡಿಯಾದಂತೆ)

ಶಿಕ್ಷಕರ ವರ್ಗಾವಣೆಗಳನ್ನು ನಿಯಂತ್ರಿಸಿ ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಶಿಕ್ಷಕರು ಲಭ್ಯವಾಗುವಂತೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಶಿಕ್ಷಕರ ವರ್ಗಾವಣೆಗಳನ್ನು ನಿಯಂತ್ರಿಸಿ ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಶಿಕ್ಷಕರು ಲಭ್ಯವಾಗುವಂತೆ ಮಾಡುವುದು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು 2006ರ ಡಿಸೆಂಬರ್ ಹದಿನಾಲ್ಕನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನೇಮಕ" ಎಂದರೆ, ನೇರನೇಮಕಾತಿ ಮೂಲಕ, ವಿಲೀನಗೊಳಿಸುವ ಮೂಲಕ ಅಥವಾ ಬಡ್ತಿಯ ಮೂಲಕ ಮಾಡಿದ ನೇಮಕ;

(ಬಿ) "ನೇಮಕಾತಿ ಪ್ರಾಧಿಕಾರ" ಎಂದರೆ, ಶಿಕ್ಷಕನ ಹುದ್ದೆಗೆ ನೇಮಕ ಮಾಡಲು ಸಕ್ಷಮವಾದ ಪ್ರಾಧಿಕಾರ;

(ಸಿ) "ಸಕ್ಷಮ ಪ್ರಾಧಿಕಾರಿ" ಎಂದರೆ, ಶಿಕ್ಷಕರ ವರ್ಗಾವಣೆ ಆದೇಶಗಳನ್ನು ಹೊರಡಿಸಲು ಸಕ್ಷಮನಾದ ಪ್ರಾಧಿಕಾರಿ;

(ಡಿ) "ಪದವಿಪೂರ್ವ ಕಾಲೇಜು" ಎಂದರೆ, ರಾಜ್ಯ ಸರ್ಕಾರಕ್ಕೆ ಸೇರಿದ ಪದವಿಪೂರ್ವ ಕಾಲೇಜುಗಳು;

(ಇ) "ಗ್ರಾಮೀಣ ಪ್ರದೇಶ" ಎಂದರೆ,-

(i) ಬಿ-ವಲಯ: ನಗರ ಪ್ರದೇಶದ ಎ - ವಲಯದ ಪರಿಮಿತಿಗಳಿಂದ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ದೂರದಲ್ಲಿರುವ ಸ್ಥಳಗಳನ್ನು ಒಳಗೊಂಡ ಪ್ರದೇಶ; ಮತ್ತು

(ii) ಸಿ-ವಲಯ: ಬಿ-ವಲಯದ ಪರಿಮಿತಿಗಳನ್ನೂ ದಾಟಿ, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಸ್ಥಳಗಳನ್ನು ಒಳಗೊಂಡ ಪ್ರದೇಶ.

(ಎಫ್) "ಶಾಲೆ" ಎಂದರೆ, ಸಂದರ್ಭಾನುಸಾರ ರಾಜ್ಯಸರ್ಕಾರಕ್ಕೆ ಸೇರಿದ ಪ್ರಾಥಮಿಕ ಅಥವಾ ಪ್ರೌಢಶಾಲೆ;

(ಜಿ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

(ಎಚ್) "ಶಿಕ್ಷಕ" ಎಂದರೆ, ರಾಜ್ಯ ಸಿವಿಲ್ ಸೇವೆಗಳಿಗೆ ಸೇರಿದ ಪ್ರಾಥಮಿಕ ಶಾಲಾ ಶಿಕ್ಷಕ ಅಥವಾ ಪ್ರೌಢಶಾಲಾ ಶಿಕ್ಷಕ ಹುದ್ದೆಗಳ ಪ್ರವರ್ಗಕ್ಕೆ ನೇಮಕಗೊಂಡ ಒಬ್ಬ ವ್ಯಕ್ತಿ ಮತ್ತು ಅದು ಪದವಿಪೂರ್ವ ಕಾಲೇಜಿನಲ್ಲಿನ ಉಪನ್ಯಾಸಕರನ್ನು ಮತ್ತು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರೆ ಹುದ್ದೆಗಳಲ್ಲಿರುವವರನ್ನು ಒಳಗೊಳ್ಳುತ್ತದೆ;

(ಐ) "ವರ್ಗಾವಣೆ" ಎಂದರೆ, ಕೆಲಸದ ಸ್ಥಳವೊಂದರಲ್ಲಿರುವ ಒಂದು ಹುದ್ದೆಗೆ ಶಿಕ್ಷಕರೊಬ್ಬರ ಸ್ಥಳ ನಿಯುಕ್ತಿ ಮತ್ತು ಒಂದು ಕೆಲಸದ ಸ್ಥಳದಲ್ಲಿನ ಹುದ್ದೆಯಿಂದ ಇನ್ನೊಂದು ಕೆಲಸದ ಸ್ಥಳದ ಹುದ್ದೆಗೆ ಮಾಡಿದ ಸ್ಥಳನಿಯುಕ್ತಿ ಹಾಗೂ ಇದರಲ್ಲಿ ಒಂದೇ ಕೇಡರಿನೊಳಗಡೆ ಒಂದು ಜೇಷ್ಠತಾ ಘಟಕದೊಳಗೆ ಅಥವಾ ಹೊರಗೆ ಮಾಡಿದ ವರ್ಗಾವಣೆಯೂ ಒಳಗೊಳ್ಳುತ್ತದೆ;

(ಜೆ) "ಜೇಷ್ಠತಾ ಘಟಕ" ಎಂದರೆ, ಶಿಕ್ಷಕ ಹುದ್ದೆಗೆ ನೇಮಕ ಮಾಡಲು ಸಕ್ಷಮವಾಗಿರುವ ನೇಮಕಾತಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿ.

(ಕೆ) "ನಗರ ಪ್ರದೇಶ" ಎಂದರೆ, ತಾಲ್ಲೂಕು ಕೇಂದ್ರ ಸ್ಥಾನ ಅಥವಾ ಜಿಲ್ಲಾ ಕೇಂದ್ರ ಸ್ಥಾನಗಳ ಪರಿಮಿತಿಗಳ ಮತ್ತು ನಗರ ಪಾಲಿಕೆಯ, ನಗರಸಭೆಯ, ಪುರಸಭೆಯ ಅಥವಾ ಪಟ್ಟಣ ಪಂಚಾಯತಿಯ ಪರಿಮಿತಿಗಳ ಒಳಗಿನ ಯಾವುವೇ ಪ್ರದೇಶಗಳು ಮತ್ತು ಅಂಥ

ಪ್ರದೇಶಗಳ ಮಿತಿಗಳಿಂದ ರಾಜ್ಯಸರ್ಕಾರವು ಕಾಲಕಾಲಕ್ಕೆ ಎ–ವಲಯವೆಂದು ಅಧಿಸೂಚಿಸಬಹುದಾದಂಥ ದೂರದಲ್ಲಿರುವ ಪ್ರದೇಶ.

3. **ಗ್ರಾಮೀಣ ಪ್ರದೇಶಗಳಿಗೆ ಶಿಕ್ಷಕರ ಕಡ್ಡಾಯ ನೇಮಕಾತಿ.–** (1) ಪ್ರತಿಯೊಂದು ನೇಮಕಾತಿ ಪ್ರಾಧಿಕಾರವು, ಶಾಲೆಗಳಲ್ಲಿ ಅಥವಾ ಪದವಿ ಪೂರ್ವ ಕಾಲೇಜುಗಳಲ್ಲಿ ಶಿಕ್ಷಕರ ಪ್ರಾರಂಭಿಕ ನೇಮಕ ಮಾಡುವಾಗ ಮೊದಲಿಗೆ ಸಿ–ವಲಯದಲ್ಲಿಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಖಚಿತಪಡಿಸಿಕೊಳ್ಳತಕ್ಕದ್ದು.

ಪರಂತು, ಗ್ರಾಮೀಣ ಪ್ರದೇಶಗಳಿಗೆ ಶಿಕ್ಷಕರ ಕಡ್ಡಾಯ ನೇಮಕಾತಿಗೆ ಸಂಬಂಧಿಸಿದ ಉಪಬಂಧಗಳು ಯಾವುದೇ ಗ್ರಾಮೀಣ ಪ್ರದೇಶವನ್ನೂ ಒಳಗೊಳ್ಳದ ಜೇಷ್ಠತಾ ಘಟಕಕ್ಕೆ ನೇಮಕಗೊಂಡ ಶಿಕ್ಷಕನಿಗೆ ಅನ್ವಯವಾಗತಕ್ಕದ್ದಲ್ಲ.

(2)ಯಾವುದೇ ಒಂದು ನಿರ್ದಿಷ್ಟ ವಲಯದಲ್ಲಿ ಪ್ರಾರಂಭಿಕ ನೇಮಕ ಅಥವಾ ವರ್ಗಾವಣೆಗೆ ಯಾವುದೇ ಖಾಲಿ ಹುದ್ದೆ ದೊರೆಯದಿದ್ದರೆ, ಕನಿಷ್ಠ ಸಂಖ್ಯೆಯ ಸೇವಾ ವರ್ಷಗಳನ್ನು ಪೂರ್ಣಗೊಳಿಸಿದ ಒಬ್ಬ ಶಿಕ್ಷಕನನ್ನು, ಮತ್ತೊಂದು ವಲಯಕ್ಕೆ ಆದ್ಯತೆಯ ಕ್ರಮದಲ್ಲಿ ಸಿ–ವಲಯದಿಂದ ಬಿ–ವಲಯಕ್ಕೆ, ಬಿ–ವಲಯದಿಂದ ಎ–ವಲಯಕ್ಕೆ ಅಥವಾ ಎ–ವಲಯದಿಂದ ಅದೇ ಜೇಷ್ಠತಾ ಘಟಕದೊಳಗಿನ ನಗರ ಪ್ರದೇಶಕ್ಕೆ ವರ್ಗಾವಣೆ ಮಾಡುವ ಮೂಲಕ ಖಾಲಿ ಹುದ್ದೆಯನ್ನು ಸೃಜಿಸಬಹುದು:

ಪರಂತು, ಸಿ–ವಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಯಾವೊಬ್ಬ ಶಿಕ್ಷಕನು ಬಿ–ವಲಯಕ್ಕೆ ವರ್ಗಾವಣೆಯಾಗಲು ಅರ್ಹನಾಗಿದ್ದು ಅದೇ ರೀತಿಯಾಗಿ ಬಿ–ವಲಯದಲ್ಲಿ ಸೇವೆಸಲ್ಲಿಸುತ್ತಿರುವ ಒಬ್ಬ ಶಿಕ್ಷಕನು ಎ–ವಲಯಕ್ಕೆ ವರ್ಗಾವಣೆಯಾಗಲು ಅರ್ಹನಾಗಿದ್ದು, ಅವನು ಸಂದರ್ಭಾನುಸಾರ ಸಿ–ವಲಯದಲ್ಲೇ ಅಥವಾ ಬಿ–ವಲಯದಲ್ಲೇ ಸೇವೆ ಸಲ್ಲಿಸುವುದನ್ನು ಮುಂದುವರಿಸಲು ಇಚ್ಛಿಸಿದರೆ, ಅವನು ಆಯಾ ವಲಯದಲ್ಲಿಯೇ ಸೇವೆಸಲ್ಲಿಸುವುದನ್ನು ಮುಂದುವರಿಸಲು ಅನುಮತಿ ನೀಡಬಹುದು.

**ವಿವರಣೆ:–** ಆದ್ಯತಾ ಕ್ರಮವನ್ನು, ಇತರ ವಿಷಯಗಳ ಜೊತೆಗೆ, ವಿವಿಧ ಕೇಡರ್‌ಗಳಲ್ಲಿ ಒಂದು ವಲಯದಲ್ಲಿ ಒಬ್ಬ ಶಿಕ್ಷಕನ ಸೇವೆಯ ಒಟ್ಟು ಅವಧಿಯ ಆಧಾರದ ಮೇಲೆ ಹಾಗೂ ನಿಯಮಿಸಬಹುದಾದ ಯಾವುದೇ ಇತರ ಮಾನದಂಡಗಳ ಆಧಾರದ ಮೇಲೆ ಲೆಕ್ಕ ಹಾಕತಕ್ಕದ್ದು

(3) ನಗರ ಪ್ರದೇಶದಲ್ಲಿರುವ ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ಅಡಿಯಲ್ಲಿ ವಿಧಿಸಿದ ಕಾಲಬದ್ಧ ದಂಡನೆಯನ್ನು ಅನುಭವಿಸುತ್ತಿರುವಂಥ ಅಥವಾ ನ್ಯಾಯಾಲಯದಲ್ಲಿ ಕ್ರಿಮಿನಲ್ ದೋಷಾರೋಪಣೆಯನ್ನು ಎದುರಿಸುತ್ತಿರುವಂಥ ಒಬ್ಬ ಶಿಕ್ಷಕನನ್ನು ಸಿ ವಲಯಕ್ಕೆ ವರ್ಗಾಯಿಸಬಹುದು. ಸಿ ವಲಯದಲ್ಲಿ ಯಾವುದೇ ಖಾಲಿ ಸ್ಥಾನವು ದೊರೆಯದೇ ಹೋದರೆ

(2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಒಂದು ಖಾಲಿಸ್ಥಾನವನ್ನು ಸೃಷ್ಟಿಮಾಡಬಹುದು.

ಪರಂತು, ಅಂಥ ಶಿಕ್ಷಕನು ಬಿ–ವಲಯದಲ್ಲಿ ಅಥವಾ ಸಿ–ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಅಂಥ ಶಿಸ್ತು ವ್ಯವಹರಣೆಗಳು, ಕ್ರಿಮಿನಲ್ ವ್ಯವಹರಣೆಗಳು ಅಥವಾ ಸಂದರ್ಭಾನುಸಾರ ದಂಡನೆ ಅವಧಿ ಪೂರ್ಣಗೊಳ್ಳುವವರೆಗೆ, ಅವನು ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ಅದೇ ವಲಯದಲ್ಲಿ ಇನ್ನೊಂದು ಸ್ಥಳಕ್ಕೆ ವರ್ಗಾಯಿಸತಕ್ಕದ್ದು, ಆದರೆ ಅವನನ್ನು, ಗ್ರಾಮೀಣ ಪ್ರದೇಶದಿಂದ ಹೊರಕ್ಕೆ ವರ್ಗಾವಣೆ ಮಾಡಕೂಡದು.

**4. ಕೌನ್ಸಿಲಿಂಗ್ ಮೂಲಕ ವರ್ಗಾವಣೆ.–** ಈ ಅಧಿನಿಯಮದ ಅಡಿಯಲ್ಲಿ ಒಬ್ಬ ಶಿಕ್ಷಕನ ವರ್ಗಾವಣೆಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನಡೆಸುವ ಗಣಕೀಕೃತ ಕೌನ್ಸ್‌ಲಿಂಗ್ ವಿಧಾನದ ಮೂಲಕ ಮಾಡತಕ್ಕದ್ದು.

**5. ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ಶಿಕ್ಷಕರ ವರ್ಗಾವಣೆ.–** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿರುವ ಮತ್ತು ಒಂದು ವಲಯದಲ್ಲಿಯ ಯಾವುದೇ ಶಾಲೆಯಲ್ಲಿ ನಿರಂತರವಾಗಿ ಹತ್ತು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ಒಬ್ಬ ಶಿಕ್ಷಕನನ್ನು ಆ ಶಾಲೆಯಲ್ಲಿ ಸಲ್ಲಿಸಿರುವ ಸೇವಾ ಅವಧಿಯ ಆಧಾರದ ಮೇಲೆ ಅದೇ ಜೇಷ್ಠತಾ ಘಟಕದೊಳಗೆ ಅದೇ ವಲಯದ ಇನ್ನೊಂದು ಶಾಲೆಗೆ ವರ್ಗಾಯಿಸತಕ್ಕದ್ದು:

[1][ಪರಂತು, ಒಂದು ಜೇಷ್ಠತಾ ಘಟಕದಲ್ಲಿ ಅಂಥ ವರ್ಗಾವಣೆಗಳ ಒಟ್ಟು ಸಂಖ್ಯೆಯು, ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗಳ ಸಂದರ್ಭದಲ್ಲಿ ಶೇಕಡಾ ಐದರಷ್ಟನ್ನು ಮತ್ತು ಅಂತರ್ ಘಟಕೀಯ ಜೇಷ್ಠತಾ ವರ್ಗಾವಣೆಗಳ ಸಂದರ್ಭದಲ್ಲಿ ಶೇಕಡಾ ಮೂರರಷ್ಟನ್ನು ಹಾಗೂ ಒಟ್ಟಾರೆಯಾಗಿ ಆ ಜೇಷ್ಠತಾ ಘಟಕದ ಕೇಡರ್‌ನಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳ ಒಟ್ಟು ಸಂಖ್ಯೆ ಶೇಕಡಾ ಎಂಟರಷ್ಟನ್ನು ಮೀರತಕ್ಕದ್ದಲ್ಲ.][1]

1. 2015ರ ಅಧಿನಿಯಮ ಸಂಖ್ಯೆ. 23ರ ಮೂಲಕ ದಿನಾಂಕ: 13.05.2015 ರಿಂದ ಪ್ರತಿಯೋಜಿಸಲಾಗಿದೆ.

**6. ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ಶಿಕ್ಷಕರನ್ನು ವರ್ಗಾವಣೆ ಮಾಡುವುದಕ್ಕೆ ನಿಷೇಧ.–** (1) ಒಬ್ಬ ಶಿಕ್ಷಕನನ್ನು (2)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಆತ ನೇಮಕಗೊಂಡ ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಮಾಡತಕ್ಕದ್ದಲ್ಲ:

ಪರಂತು, ಒಂದು ಜೇಷ್ಠತಾ ಘಟಕದಲ್ಲಿ ಹೆಚ್ಚುವರಿ ಎಂದು ಕಂಡು ಬಂದ ಒಬ್ಬ ಶಿಕ್ಷಕನನ್ನು ಇನ್ನೊಂದು ಜೇಷ್ಠತಾ ಘಟಕದಲ್ಲಿರುವ ಶಿಕ್ಷಕರು ಅಗತ್ಯವಿರುವ ಶಾಲೆಗೆ ಅಥವಾ ಪದವಿಪೂರ್ವ ಕಾಲೇಜಿಗೆ ವರ್ಗಾಯಿಸಬಹುದು ಅಥವಾ ಪುನಃ ನಿಯೋಜಿಸಬಹುದು:

[1][ಮತ್ತು ಪರಂತು, ಸೇವೆಯಲ್ಲಿರುವ ಮತ್ತು ವರ್ಗಾವಣೆ ಅರ್ಜಿಯನ್ನು ಸಲ್ಲಿಸುವುದಕ್ಕಾಗಿ ನಿಗದಿಪಡಿಸಿದ ಕೊನೆಯ ದಿನಾಂಕದಂದು ಒಂದು ಜ್ಯೇಷ್ಠತೆಯ ಘಟಕದಲ್ಲಿ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಪೂರ್ಣಗೊಳಿಸಿದ ಶಿಕ್ಷಕನನ್ನು, ಆತನ ಕೋರಿಕೆಯ ಮೇರೆಗೆ, ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ, ಜ್ಯೇಷ್ಠತೆಯ ಮತ್ತೊಂದು ಘಟಕಕ್ಕೆ, ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಠ ಪರಿಮಿತಿಗೊಳಪಟ್ಟು, ಆತನ ಸೇವೆಯಲ್ಲಿ ಒಂದು ಬಾರಿಗಿಂತ ಹೆಚ್ಚಿಲ್ಲದಂತೆ, ವರ್ಗಾಯಿಸಬಹುದು.][1]

1. 2015ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 13.08.2015ರಿಂದ ಪ್ರತಿಯೋಜಿಲಾಗಿದೆ.

(2) ಈ ಮುಂದಿನ ಪ್ರಕರಣಗಳಲ್ಲಿ (1)ನೇ ಉಪ ಪ್ರಕರಣದ ಉಪಬಂಧವನ್ನು ಸಡಿಲಗೊಳಿಸಬಹುದು, ಎಂದರೆ:-

[1][(1) ಗಂಡ, ಹೆಂಡತಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಮತ್ತು ಶಿಕ್ಷಕರು ಪ್ರಸ್ತುತ ಇರುವ ಜೇಷ್ಠತಾ ಘಟಕದಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿದ್ದಲ್ಲಿ, ಕೌನ್ಸಿಲಿಂಗ್ ಮೂಲಕ ಆತನ/ಆಕೆಯ ಹೆಂಡತಿ/ಗಂಡ ಸೇವೆ ಸಲ್ಲಿಸುತ್ತಿರುವ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ಸ್ಪಷ್ಟ ಖಾಲಿ ಸ್ಥಳದ ಲಭ್ಯತೆಯ ಆಧಾರದ ಮೇರೆಗೆ ಸೇವಾ ಅವಧಿಯಲ್ಲಿ ಎರಡು ಬಾರಿಗಿಂತ ಹೆಚ್ಚಲ್ಲದೆ ವರ್ಗಾವಣೆ ಮಾಡಬಹುದು.

(1ಎ) ಪರಸ್ಪರ ವರ್ಗಾವಣೆಗಳ ಸಂದರ್ಭದಲ್ಲಿ, ಇಬ್ಬರೂ ಶಿಕ್ಷಕರು ಕನಿಷ್ಟ ಮೂರು ವರ್ಷಗಳ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ಷರತ್ತಿಗೆ ಒಳಪಟ್ಟು; ಆ ವಲಯಕ್ಕೆ ವರ್ಗಾಯಿಸಲು ಅನ್ಯಥಾ ಅರ್ಹನಾಗಿರುವ; ಕನಿಷ್ಟ ಮೂರು ವರ್ಷಗಳ ಸೇವೆಯು ಬಾಕಿ ಉಳಿದಿರುವ; ಆದರೆ ಅಂಥ ಪರಸ್ಪರ ವರ್ಗಾವಣೆಯು ಆತನ ಸೇವಾವಧಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಅನುಮತಿಸತಕ್ಕದ್ದಲ್ಲ ಹಾಗೂ ಆತನು ಜೇಷ್ಠತೆಯ ರಕ್ಷಣೆಗೆ ಅರ್ಹನಾಗಿರತಕ್ಕದ್ದಲ್ಲ.][1]

1. 2015ರ ಅಧಿನಿಯಮ ಸಂಖ್ಯೆ. 23ರ ಮೂಲಕ ದಿನಾಂಕ: 13.05.2015 ರಿಂದ ಪ್ರತಿಯೋಜಿಸಲಾಗಿದೆ.

(2) ಶಿಕ್ಷಕಿಯು ವಿಧವೆಯಾಗಿದ್ದಲ್ಲಿ ;

(3) ಶಿಕ್ಷಕನು ಅಂಗವಿಕಲನಾಗಿದ್ದಲ್ಲಿ ಅಥವಾ ಅಶಕ್ತನಾಗಿದ್ದಲ್ಲಿ;

(4) ಒಬ್ಬ ಶಿಕ್ಷಕನು ಅಥವಾ ಅವನ/ಅವಳ, ಗಂಡ/ಹೆಂಡತಿಯು ಅಥವಾ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ವೈದ್ಯಕೀಯ ಚಿಕಿತ್ಸೆಯು ಅವನು/ಅವಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ದೊರೆಯದಿದ್ದಲ್ಲಿ ಮತ್ತು ಅವನಿಗೆ/ಅವಳಿಗೆ ವೈದ್ಯಕೀಯ ಚಿಕಿತ್ಸೆ ದೊರೆಯುವಂಥ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಾಗಿರುವಲ್ಲಿ. ಆದಾಗ್ಯೂ ಚಿಕಿತ್ಸೆಯ ಸ್ವರೂಪ, ಅವನು/ಅವಳು ಕಾರ್ಯನಿರ್ವಹಿಸುತ್ತಿರುವ

ಸ್ಥಳದಲ್ಲಿ ಸಂಬಂಧಪಟ್ಟ ಖಾಯಿಲೆಗೆ ವೈದ್ಯಕೀಯ ಚಿಕಿತ್ಸೆ ದೊರೆಯದಿರುವ ಬಗ್ಗೆ ಮತ್ತು ಅಂಥ ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ಮತ್ತು ಅವನು/ಅವಳು ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವರನ್ನು ಅಂಥ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಿದೆ, ಎಂಬುದರ ಬಗ್ಗೆ ನಿರ್ದಿಷ್ಟವಾಗಿ

ತಿಳಿಸಿರುವ ಜಿಲ್ಲಾ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಿಕ್ಷಕನು/ಳು ಹಾಜರುಪಡಿಸಿದ ಹೊರತು ಅಂಥ ವರ್ಗಾವಣೆಯನ್ನು ಮಾಡತಕ್ಕದ್ದಲ್ಲ.

[1][(5) ಶಿಕ್ಷಕನನ್ನು, ಆತನ ಕೋರಿಕೆಯ ಮೇರೆಗೆ, ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ, ಜ್ಯೇಷ್ಠತೆ ಘಟಕದ ಹೊರಗೆ ಆತನ ಸಂಗಾತಿಯು ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿನ ಅಂಥ ಸ್ಥಳ ಅಥವಾ ಹತ್ತಿರದ ಸ್ಥಳ ಅಥವಾ ಹುದ್ದೆಗೆ, ಆದರೆ ನಗರ ಪ್ರದೇಶವನ್ನು ಹೊರತುಪಡಿಸಿ, ವರ್ಗಾಯಿಸಬಹುದು.][1]

1. 2015ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 13.08.2015ರಿಂದ ಸೇರಿಸಲಾಗಿದೆ.

**7. ದಂಡಗಳು.–** ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಸಕ್ಷಮ ಪ್ರಾಧಿಕಾರ ಅಥವಾ ಯಾವೊಬ್ಬ ಅಧಿಕಾರಿಯು ಸ್ಥಳ ನಿಯುಕ್ತಿ ಅಥವಾ ನೇಮಕಾತಿ ಅಥವಾ ವರ್ಗಾವಣೆಯ ಆದೇಶವನ್ನು ಮಾಡಿದ್ದರೆ ಸಂದರ್ಭಾನುಸಾರ ಅಂಥ ಸಕ್ಷಮ ಪ್ರಾಧಿಕಾರ ಅಥವಾ ಅಧಿಕಾರಿ ಸಿವಿಲ್ ಸೇವಕರಿಗೆ ಅನ್ವಯಿಸುವಂಥ ಶಿಸ್ತು ನಿಯಮಾವಳಿ ಅಡಿಯಲ್ಲಿ ಶಿಸ್ತಿನ ಕ್ರಮಕ್ಕೆ ಗುರಿಯಾಗತಕ್ಕದ್ದು.

**8. ಅಪರಾಧಗಳ ಸಂಜ್ಞೇಯತೆ.–** ಯಾವ ನ್ಯಾಯಾಲಯವೂ, ಸರ್ಕಾರಿ ರಾಜ್ಯಪತ್ರದಲ್ಲಿ ಈ ಬಗ್ಗೆ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಸರ್ಕಾರದಿಂದ ಅಧಿಕಾರಪಡೆದ ಒಬ್ಬ ಅಧಿಕಾರಿಯು ಲಿಖಿತ ದೂರು ಸಲ್ಲಿಸಿದ ಮೇಲೆ ಹೊರತು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**9. ಇತರ ಕಾನೂನುಗಳ ಮೇಲೆ ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾಗಿ ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**10. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು

ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವ ಆದೇಶವನ್ನೂ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಮಾಡತಕ್ಕದ್ದಲ್ಲ.

**11. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಮೂದನ್ನು ಸೇರಿಸಬಹುದು, ಮಾರ್ಪಡಿಸಬಹುದು ಅಥವಾ ತೆಗೆದುಹಾಕಬಹುದು.

**12. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಕೈಗೊಳ್ಳಲು ಅವಕಾಶವಿರತಕ್ಕದ್ದಲ್ಲ.

**13. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆ ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದ ತರುವಾಯ ನಿಯಮವನ್ನು ರಚಿಸಿದ ಕಾರಣಗಳನ್ನು ನಿರ್ದಿಷ್ಟವಾಗಿ ತಿಳಿಸುವ ಹೇಳಿಕೆಯೊಂದನ್ನು ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು ಮತ್ತು (3)ನೇ ಉಪ ಪ್ರಕರಣದಡಿ ಮಾಡಿದ ಯಾವುದೇ ಮಾರ್ಪಾಟಿಗೊಳಪಟ್ಟು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಪ್ರತಿಯೊಂದು ನಿಯಮವು, ಈ ಅಧಿನಿಯಮದ ಅಡಿಯಲ್ಲಿ ಅದು ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಹೊರಡಿಸಿದ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಅಥವಾ ಅಧಿಸೂಚನೆಯನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ

ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೂ ಬಾಧಕವಾಗತಕ್ಕದ್ದಲ್ಲ.

**14. ತಾತ್ಕಾಲಿಕ ಉಪಬಂಧಗಳು.–** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ಹಾಗೂ ಯಾವ ವಿಷಯಗಳ ಪುರೋಭಿವೃದ್ಧಿಗಾಗಿ ಈ ಅಧಿನಿಯಮವನ್ನು ಜಾರಿಗೆ ತರಲಾಗಿದೆಯೋ ಅಥವಾ ಉಪಬಂಧ ಕಲ್ಪಿಸಲಾಗಿದೆಯೋ ಅದಕ್ಕೆ ಸಂಬಂಧಪಟ್ಟ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ14)ರ ಅಡಿಯಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ರಚಿಸಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕಗಳು ಅವು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯದಿಂದ ಅಥವಾ ತೆಗೆದುಕೊಂಡ ಯಾವುದೇ ಕ್ರಮದಿಂದ ಅಥವಾ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕದಿಂದ ರದ್ದಾದ ಹೊರತು ಮತ್ತು ರದ್ದಾಗುವವರೆಗೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ಅವುಗಳನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ರಚಿಸಿದ್ದರೆ ಅಥವಾ ಹೊರಡಿಸಿದ್ದರೆ ಅಥವಾ ನೇಮಿಸಿದ್ದರೆ, ಹೇಗೋ ಹಾಗೆ ಜಾರಿಯಲ್ಲಿ ಮುಂದುವರಿಯತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು.

**15. ನಿರಸನ ಮತ್ತು ಉಳಿಸುವಿಕೆಗಳು.–** (1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧ್ಯಾದೇಶ, 2006ನ್ನು (2006ರ ಕರ್ನಾಟಕ ಅಧ್ಯಾದೇಶ 4) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

**ಅನುಸೂಚಿ**

**[2(ಎಚ್) ಮತ್ತು 9ನೇ ಪ್ರಕರಣಗಳನ್ನು ನೋಡಿ]**

| ಕ್ರಮ ಸಂಖ್ಯೆ | ಶಿಕ್ಷಕರ ಹುದ್ದೆಗಳ ಪದನಾಮ |
|---|---|
| (1) | (2) |

| ಕ್ರಮ ಸಂಖ್ಯೆ | ಶಿಕ್ಷಕರ ಹುದ್ದೆಗಳ ಪದನಾಮ |
|---|---|
| | **I. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಹುದ್ದೆಗಳು** |
| 1. | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರು / ಮುಖ್ಯೋಪಾಧ್ಯಾಯಿನಿಯರು |
| 2. | ಮಾದರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಪದವಿಧರರಲ್ಲದ ಮುಖ್ಯೋಪಾಧ್ಯಾಯರು. |
| 3. | ಈ ಮುಂದಿನ ಪ್ರವರ್ಗಗಳನ್ನು ಒಳಗೊಂಡ ಪ್ರಾಥಮಿಕ ಶಾಲೆ ಸಹಾಯಕ ಉಪಾಧ್ಯಾಯರು / ಉಪಾಧ್ಯಾಯಿನಿಯರು<br>(i) ಪ್ರಾಥಮಿಕ ಶಾಲಾ ಸಹಾಯಕ ಉಪಾಧ್ಯಾಯರು / ಉಪಾಧ್ಯಾಯಿನಿಯರು (ಸಾಮಾನ್ಯ);<br>(ii) ಪ್ರಾಥಮಿಕ ಶಾಲಾ ಸಹಾಯಕ ಉಪಾಧ್ಯಾಯರು / ಉಪಾಧ್ಯಾಯಿನಿಯರು (ವಿಜ್ಞಾನ);<br>(iii) ಪ್ರಾಥಮಿಕ ಶಾಲಾ ಸಹಾಯಕ ಉಪಾಧ್ಯಾಯರು / ಉಪಾಧ್ಯಾಯಿನಿಯರು (ಇಂಗ್ಲೀಷ್); ಮತ್ತು<br>(iv) ಪ್ರಾಥಮಿಕ ಶಾಲಾ ಸಹಾಯಕ ಉಪಾಧ್ಯಾಯರು / ಉಪಾಧ್ಯಾಯಿನಿಯರು (ಹಿಂದಿ); |
| 4. | ಸಂಗೀತ ಶಿಕ್ಷಕ. |
| 5. | ದೈಹಿಕ ಶಿಕ್ಷಣ ಶಿಕ್ಷಕ ದರ್ಜೆ–II. |
| 6. | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು / ಮಾದರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ರೇಖಾಚಿತ್ರ (ಡ್ರಾಯಿಂಗ್) ಶಿಕ್ಷಕರು |
| | **II. ಸರ್ಕಾರಿ ಪ್ರೌಢಶಾಲೆಗಳಲ್ಲಿನ ಹುದ್ದೆಗಳು** |
| 1. | ಸರ್ಕಾರದ ಹೈಯರ್ ಸೆಕೆಂಡರಿ / ವಿವಿಧೋದ್ದೇಶ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರು / ಮುಖ್ಯೋಪಾಧ್ಯಾಯಿನಿಯರು ಮತ್ತು ಸರ್ಕಾರಿ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರು / ಮುಖ್ಯೋಪಾಧ್ಯಾಯಿನಿಯರೂ ಸೇರಿದಂತೆ ಯಾವುದೇ ಹೆಸರಿನಿಂದ ಕರೆಯಲಾಗುವ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಮುಖ್ಯೋಪಾಧ್ಯಾಯರು |
| 2. | ಸೆಕೆಂಡರಿ ಶಾಲಾ ಸಹಾಯಕರು (ದರ್ಜೆ–I) |
| 3. | ಸೆಕೆಂಡರಿ ಶಾಲಾ ಸಹಾಯಕರು (ದರ್ಜೆ–II) |
| 4. | ಈ ಮುಂದಿನ ಹುದ್ದೆಗಳ ಪ್ರವರ್ಗಗಳನ್ನು ಒಳಗೊಂಡ ಸರ್ಕಾರಿ ಪ್ರೌಢಶಾಲೆಗಳು, ಸಂಯುಕ್ತ ಪದವಿಪೂರ್ವ ಕಾಲೇಜುಗಳು, ಸಂಯುಕ್ತ ಪ್ರೌಢಶಾಲೆಗಳಲ್ಲಿನ ಪದವಿಧರ ಸಹಾಯಕ ಉಪಾಧ್ಯಾಯರು / ಉಪಾಧ್ಯಾಯಿನಿಯರು. |

| ಕ್ರಮ ಸಂಖ್ಯೆ | ಶಿಕ್ಷಕರ ಹುದ್ದೆಗಳ ಪದನಾಮ |
|---|---|
| | (i) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಶಿಕ್ಷಣ ಮಾಧ್ಯಮಗಳಲ್ಲಿನ ಸಹಾಯಕ ಕಲಾ ಉಪಾಧ್ಯಾಯರು;<br>(ii) ಕನ್ನಡ, ಇಂಗ್ಲೀಷ್ ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಶಿಕ್ಷಣ ಮಾಧ್ಯಮಗಳಲ್ಲಿ ಫಿಜಿಕಲ್ ಸೈನ್ಸ್ ಸಹಾಯಕ ಉಪಾಧ್ಯಾಯರು;<br>(iii) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಶಿಕ್ಷಣ ಮಾಧ್ಯಮಗಳಲ್ಲಿ ಜೀವಶಾಸ್ತ್ರ ಸಹಾಯಕ ಉಪಾಧ್ಯಾಯರು;<br>(iv) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಭಾಷಾ ಸಹಾಯಕರು. |
| 5. | ಸರ್ಕಾರಿ ಪ್ರೌಢಶಾಲೆಗಳು ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ದರ್ಜೆ–I. |
| 6. | ನಾಟಕ ಶಿಕ್ಷಕ (ದರ್ಜೆ–II) |
| 7. | ನೃತ್ಯ ಶಿಕ್ಷಕ (ದರ್ಜೆ–II) |
| 8. | ಕಲಾ ಉಪಾಧ್ಯಾಯರು. |
| 9. | ರೇಖಾಚಿತ್ರ (ಡ್ರಾಯಿಂಗ್) ಉಪಾಧ್ಯಾಯರು. |
| 10. | ಕುಶಲಕಲೆ ಶಿಕ್ಷಕರು (ದರ್ಜೆ–II). |
| | **III. ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿಯ ಹುದ್ದೆಗಳು** |
| 1. | ಪ್ರಾಧ್ಯಾಪಕರು |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**ಜಿ.ಕೆ.ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**2015 ರ ಕರ್ನಾಟಕ ಅಧಿನಿಯಮ ಸಂಖ್ಯೆ: 23**

(2015ರ ಮೇ ಹದಿಮೂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2015**

(2015ರ ಮೇ ಹನ್ನೊಂದನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 29) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 5 ಮತ್ತು 6ನ್ನು ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.

**2015 ರ ಕರ್ನಾಟಕ ಅಧಿನಿಯಮ ಸಂಖ್ಯೆ: 32**

(2015ರ ಆಗಸ್ಟ್ ಹದಿಮೂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ಅಧಿನಿಯಮ, 2015**

(2015ರ ಆಗಸ್ಟ್ ಹನ್ನೆರಡನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) 2007ನ್ನು (2007ರ ಕರ್ನಾಟಕ ಅಧಿನಿಯಮ 29) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 6ನ್ನು ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.